ವಿಜಯವಾಣಿ
ಕನ್ನಡಿಗರ ಧ್ವನಿ

# ಜೈನ್ ವಿವಿಗೆ ರೋಚಕ ಜಯ

## ಅಖಿಲ ಭಾರತ ವಿವಿ ಕ್ರೀಡಾಕೂಟ

**ಬೆಂಗಳೂರು:** ಕೊನೆ ಕ್ಷಣದಲ್ಲಿ ಪ್ರೀತಮ್ ಗಳಿಸಿದ ಅಂಕದ ನೆರವಿನಿಂದ ಜೈನ್ ವಿಶ್ವವಿದ್ಯಾಲಯ ತಂಡ ಅಖಿಲ ಭಾರತ ವಿಐಇ-2014 ಕ್ರೀಡಾಕೂಟದ ಪುರುಷರ ಬಾಸ್ಕೆಟ್‌ಬಾಲ್‌ನಲ್ಲಿ 72-71 ರಿಂದ ಚೆನ್ನೈನ ಸತ್ಯಭಾಮ ವಿಶ್ವವಿದ್ಯಾಲಯ ವಿರುದ್ಧ ಜಯ ದಾಖಲಿಸಿ ಫೈನಲ್ ಪ್ರವೇಶಿಸಿದೆ.

ಮಾಧವನ್ ಪಾರ್ಕ್‌ನಲ್ಲಿ ನಡೆದ ಸೆಮಿಫೈನಲ್ ಲೀಗ್ ಪಂದ್ಯದಲ್ಲಿ ಜೈನ್ ವಿವಿ ಪರ ಪ್ರೀತಮ್ 18 ಅಂಕ, ಕೈಫ್ 16 ಅಂಕ, ವಿನೋತ್ 15 ಅಂಕ ಗಳಿಸಿದರು. ಸತ್ಯಭಾಮ ವಿಶ್ವವಿದ್ಯಾಲಯ ಪರ ಮಂದೀಪ್ 23 ಅಂಕ, ಪ್ರೇಮ್‌ಕುಮಾರ್ 15 ಅಂಕ ಗಳಿಸಿದರು. ದಿನದ ಮತ್ತೊಂದು ಸೆಮಿಫೈನಲ್ ಲೀಗ್ ಪಂದ್ಯದಲ್ಲಿ ಚೆನ್ನೈನ ಹಿಂದೂಸ್ತಾನ್ ವಿವಿ 71-66 ರಿಂದ ಬೆಂಗಳೂರಿನ ಕ್ರೈಸ್ಟ್ ವಿವಿ ವಿರುದ್ಧ ಗೆಲುವು ಸಾಧಿಸಿತು. ಮಹಿಳಾ ವಿಭಾಗದ ಪಂದ್ಯದಲ್ಲಿ ಬೆಂಗಳೂರಿನ ಜೈನ್ ವಿವಿ 48-36 ರಿಂದ ಕ್ರೈಸ್ಟ್ ವಿವಿ ವಿರುದ್ಧ ಗೆಲುವು ಪಡೆದು ಫೈನಲ್ ಪ್ರವೇಶಿಸಿತು. ವಿಜಯಿ ತಂಡದ ಪರ ಸುಷ್ಮಿತಾ 17 ಅಂಕ ಗಳಿಸಿದರು. ಚೆನ್ನೈನ ಎಂಒಪಿ ತಂಡ 48-53 ರಿಂದ ಚೆನ್ನೈನ ಹಿಂದೂಸ್ತಾನ ವಿವಿ ವಿರುದ್ಧ ಸೋಲನುಭವಿಸಿದರೂ ಫೈನಲ್ ಪ್ರವೇಶಿಸಲು ಯಶಸ್ವಿಯಾಯಿತು. ಸೆಮಿಫೈನಲ್ ಲೀಗ್‌ನಲ್ಲಿ ಈ ಮೊದಲ ಚೆನ್ನೈನ ಎಂಒಪಿ ತಂಡ 2 ಪಂದ್ಯ ಗೆದ್ದಿತ್ತು.